| | |
|---|---|
| ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ. | |
| ಸಿ.ಸಿ.ನಂ.**34/2022** | |
| ಚಾಸಾ-**4** | |
| ಪ್ರಾಸಾ-**6** | |
| ಸಾಕ್ಷಿದಾರರ ಹೆಸರು | ಬಾಬುಸಾಬ ಅಲಿಯಾಸ ಮಾಬುಸಾಬ ಮ್ಯಾಗೇರಿ |
| ತಂದೆಯ ಹೆಸರು | ದಾವಲಸಾಬ |
| ವಯಸ್ಸು | **52** ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸಸ್ಥಳ | ಉಡುಪಿ |

ದಿನಾಂಕ **28.10.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆ:- ಸ.ಸ.ಅ ರವರಿಂದ:-

1. ನನಗೆ ಚಾಸಾ-1 ಮತ್ತು 3 ರವರ ಪರಿಚಯವಿದೆ. ನನಗೆ ಚಾಸಾ-5 ರಿಂದ 8 ರವರ ಪರಿಚಯವಿಲ್ಲ. ಇಂದು ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಹೊಡೆಬಡೆ ಮಾಡಿರುತ್ತಾರೆ. ನನಗೆ ಚಾಸಾ-3 ರವರ ಪರಿಚಯವಿದ್ದು, ಅವರ ಮಗಳಾದ ಚಾಸಾ-1 ರವರ ಗಂಡ ಮರಣ ಹೊಂದಿದ್ದರಿಂದ ದಿನಾಂಕ 17.07.2021 ರಂದು ನಾನು ಅವರನ್ನು ಮಾತನಾಡಿಸಲು ಜಮಖಂಡಿ ತಾಲೂಕಿನ ಹುನ್ನೂರು ಗ್ರಾಮಕ್ಕೆ ಬಂದಿದ್ದೆ. ನಾನು ಚಾಸಾ-1 ರವರ ಮನೆಗೆ ಬಂದಾಗ ಸಂಜೆ 7.30 ಗಂಟೆ ಆಗಿತ್ತು. ನಾನು ಚಾಸಾ-1 ಮತ್ತು 3 ರವರನ್ನು ಮಾತನಾಡಿಸಿ ಚಹಾ ಕುಡಿದು, ನಂತರ ನಾನು ಹೊರಡಲು ಸಿದ್ಧನಾದಾಗ ಚಾಸಾ-3 ರವರು ಈಗ ರಾತ್ರಿ 8.00 ಗಂಟೆಯಾಗಿದೆ, ಬಸ್ಸುಗಳು ಸಿಗುವುದಿಲ್ಲ, ಆದ್ದರಿಂದ ರಾತ್ರಿ ಇಲ್ಲೇ ಉಳಿದು ಬೆಳಿಗ್ಗೆ ಹೋಗುವಂತೆ ಹೇಳಿದರು. ಆದ್ದರಿಂದ ನಾನು ಅವರ ಮನೆಯಲ್ಲಿ ಉಳಿದುಕೊಂಡಿರುತ್ತೇನೆ.

2. ಅದೇ ದಿನ ರಾತ್ರಿ 10 ರಿಂದ 10.30 ಗಂಟೆ ಮಧ್ಯದಲ್ಲಿ ಆರೋಪಿತರೆಲ್ಲರೂ ಚಾಸಾ-1 ಮತ್ತು 3 ರವರ ಮನೆಯ ಒಳಗೆ ಬಂದು ನನ್ನನ್ನು ಹೊರಗೆ ಎಳೆದು ತಂದಿರುತ್ತಾರೆ. ಆರೋಪಿತರ ಪೈಕಿ 3-4 ಜನರು ಚಾಸಾ-1 ರವರಿಗೆ "ಗಂಡ ಸತ್ತ ನಂತರ ನೀನು ಯಾರನ್ನೋ ಮನೆಯಲ್ಲಿ ತಂದು ಕೂಡಿಸಿಕೊಂಡಿದ್ದೀರಾ" ಎಂದು ಹೇಳಿ ಕೈಯಿಂದ ಹೊಡೆಬಡೆ ಮಾಡಿರುತ್ತಾರೆ. ನಂತರ ಆರೋಪಿತರೆಲ್ಲರೂ ನನ್ನನ್ನು ಲೈಟಿನ ಕಂಬಕ್ಕೆ ಕಟ್ಟಿ ಹಾಕಿ, ಹೊಡೆದು, ಒದ್ದು ಮತ್ತು ಕಿವಿಗೆ ಹೊಡೆದಿರುತ್ತಾರೆ. ಆರೋಪಿತರು ನನ್ನ ಜೀವ ತೆಗೆಯಲು ಹೊಡೆದಿರುತ್ತಾರೆ. ನನ್ನನ್ನು ಹೊಡೆಯುವುದನ್ನು ಓಣಿಯಲ್ಲಿನ ಜನರು ಲೈಟಿನ ಬೆಳಕಿನಲ್ಲಿ ನೋಡಿದ್ದರೂ ಸಹಿತ, ಯಾರೂ ಬಿಡಿಸಲು ಬಂದಿರುವುದಿಲ್ಲ. ಸ್ವಲ್ಪ ಸಮಯದ ನಂತರ ಓಣಿಯ ಜನರು ನನ್ನನ್ನು ಆರೋಪಿತರಿಂದ ಬಿಡಿಸಿರುತ್ತಾರೆ. ನಂತರ ನಾನು, ಚಾಸಾ-1 ಮತ್ತು 3 ರವರು ಕಂಪ್ಲೆಂಟ್ ಕೊಡಲು ಪೋಲಿಸ್

ಠಾಣೆಗೆ ಹೋದೆವು. ನಂತರ ಚಾಸಾ-1 ರವರು ಕಂಪ್ಲೇಂಟ್ ಕೊಟ್ಟಿರುತ್ತಾರೆ. ನಂತರ ಪೋಲಿಸರು ನನ್ನನ್ನು ಬೆಳಿಗ್ಗೆ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿರುತ್ತಾರೆ. ನಾನು ಒಂದು ದಿನ ಆಸ್ಪತ್ರೆಯಲ್ಲಿದ್ದು ಚಿಕಿತ್ಸೆ ಪಡೆದಿರುತ್ತೇನೆ.

3. ಈಗ ಸಾಕ್ಷಿಗೆ ಕಡತದಲ್ಲಿರುವ ಎರಡು ಫೋಟೋಗಳನ್ನು ತೋರಿಸಲಾಗಿ, ಸಾಕ್ಷಿಯು ಅವುಗಳನ್ನು ನೋಡಿ, ನಾನು ಪೋಲಿಸ್ ಠಾಣೆಗೆ ಹೋದಾಗ ಪೋಲಿಸರು ಸದರಿ ಫೋಟೋಗಳನ್ನು ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ಆದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ-9 ಮತ್ತು ನಿಪಿ-10 ಎಂದು ಗುರುತಿಸಲಾಯಿತು. ಈಗ ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಓ-2 ಹಗ್ಗ ನೋಡಿ, ಸದರಿ ಹಗ್ಗದಿಂದ ನನ್ನನ್ನು ಆರೋಪಿತರು ಕಟ್ಟಿ ಹಾಕಿದ್ದರು ಎಂದು ನುಡಿಯುತ್ತಾರೆ. ನಾನು ಪೋಲಿಸರ ಮುಂದೆ ಘಟನೆಯ ಬಗ್ಗೆ ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಎನ್ ಬಿ ಜಿ ವಕೀಲರಿಂದಃ-

1. ನಾನು ರಾತ್ರಿ ಉಡುಪಿಯಿಂದ ತೆರಳಿ ಬೆಳಿಗ್ಗೆ ಜಮಖಂಡಿಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕುಷ್ಟಗಿ ತಾಲೂಕಿನ ನನ್ನ ಗ್ರಾಮವಾದ ಕಲಾಲಬಂಡಿ ಊರಿಗೆ ಹೋಗಿ ನಂತರ ಜಮಖಂಡಿಗೆ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಕಲಾಲಬಂಡಿ ಗ್ರಾಮದಿಂದ ಜಮಖಂಡಿಗೆ ಬಸ್ಸಿನಲ್ಲಿ ಬರಲು ಸುಮಾರು 2-3 ಗಂಟೆ ಸಮಯ ಬೇಕಾಗುತ್ತದೆ ಎಂದು ವಕೀಲರು ಸೂಚಿಸಿದಾಗ, ಸಾಕ್ಷಿಯು 5-6 ಗಂಟೆ ಬೇಕಾಗುತ್ತದೆ ಎಂದು ನುಡಿಯತ್ತಾರೆ. ಸಾಮಾನ್ಯವಾಗಿ ಮಾತನಾಡಿಸಲು ಬರುವವರು ಹೊತ್ತು ಮುಳುಗುವ ಮಂಚೆಯೇ ಬಂದು ಮಾತನಾಡಿಸಿ ಹೋಗುತ್ತಾರೆ ಎಂದರೆ ಸರಿ. ಮಾತನಾಡಿಸಲು ಬಂದವರು ಮನೆಯಲ್ಲಿ ಉಳಿಯುವುದಿಲ್ಲ ಮರಳಿ ಹೋಗುತ್ತಾರೆ ಎಂದು ವಕೀಲರು ಸೂಚಿಸಿದಾಗ, ಸಾಕ್ಷಿಯು ತಡವಾದರೆ ಮನೆಯಲ್ಲಿ ಉಳಿದುಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ನಾನು ಚಾಸಾ-1 ರವರ ಗಂಡನ ತಾಯಿಯಾದ 8ನೇ ಆರೋಪಿಯನ್ನು ಭೇಟಿ ಮಾಡಿರುವುದಿಲ್ಲ.

2. ನನಗೆ ಮರಳಿ ಹೋಗಲು ತಡವಾಗಿರುತ್ತದೆ, ಚಾಸಾ-1 ರವರ ಮನೆಯಲ್ಲಿ ವಸತಿ ಮಾಡುತ್ತೇನೆ ಎಂದು 8ನೇ ಆರೋಪಿಗೆ ನಾನು ಹೇಳಿರುವುದಿಲ್ಲ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಜನರು ಊಟ ಮಾಡಿ ರಾತ್ರಿ 8 ಗಂಟೆಗೆ ಮಲಗುತ್ತಾರೆ ಎಂದರೆ ಸಾಕ್ಷಿಯು ಒಮ್ಮೊಮ್ಮೆ ತಡವಾಗಿ ರಾತ್ರಿ 10 ಗಂಟೆವರೆಗೂ ಮಲಗುತ್ತಾರೆ ಎಂದು ನುಡಿಯುತ್ತಾರೆ. ನಾನು ಮಾತನಾಡುತ್ತಾ ಕುಳಿತ್ತಿದ್ದಾಗ, ಆರೋಪಿತರು ಬಂದು ನನ್ನನ್ನು ಹೊಡೆಬಡೆ ಮಾಡಿರುತ್ತಾರೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನನ್ನು ಒಂದು ಕಂಬಕ್ಕೆ ಕಟ್ಟಿ ಹೊಡೆಬಡೆ ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. 1ನೇ ಆರೋಪಿಯು ನನಗೆ ಗಂಡಸರು ಇಲ್ಲದ ಮನೆಯಲ್ಲಿ ಏಕೆ ಉಳಿದುಕೊಂಡಿದ್ದೀರಿ ಎಂದು ಕೇಳಿದ್ದರಿಂದ, ನಾನು ಅವರ ವಿರುದ್ಧ ಸುಳ್ಳು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ 8ನೇ ಆರೋಪಿ ಮತ್ತು ಆಕೆಯ ಮೃತ ಮಗ ಪರಿಚಯವಿಲ್ಲ. ಚಾಸಾ-1 ಮತ್ತು 8ನೇ ಆರೋಪಿಯ ಮಧ್ಯ ಹಣದ ಮತ್ತು ಆಸ್ತಿಯ ಕುರಿತು ವಿವಾದ ಇರುವುದರಿಂದ, ಚಾಸಾ-1 ರವರು ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿದ್ದು, ನಾನು ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನನ್ನು ಕೊಲ್ಲುವ ಉದ್ದೇಶದಿಂದ ಹೊಡೆದಿಲ್ಲ. ಸಾಕ್ಷಿಯು ಮುಂದುವರೆದು ಎಲ್ಲಾ ಆರೋಪಿತರು ನನ್ನನ್ನು ಕಂಬಕ್ಕೆ ಕಟ್ಟಿ ಹೊಡೆದಿರುತ್ತಾರೆ ಎಂದು ಸ್ವತಃ ನುಡಿಯುತ್ತಾರೆ. ಚಾಸಾ-3 ರವರು ನನಗೆ ಆತ್ಮೀಯರಾಗಿರುವುದರಿಂದ, ಚಾಸಾ-1 ರವರಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>**.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

RAJASHEKHAR Digitally signed by RAJASHEKHAR
Date: 2025.10.28 15:23:23 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.